* ಶ್ರೀ ಬ್ಲೇಸಿಯಸ್ ಎಂ. ಡಿಸೋಜ : (ಮಲೆನಾಡು ಅಭಿವೃದ್ಧಿ ಮಂಡಳಿಯ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗಾಗಿ 1991-92ನೇ ಸಾಲಿಗೆ 10.00 ಕೋಟಿ ರೂ.ಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿತ್ತು. ಇದನ್ನು ಪಡೆದುಕೊಂಡು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಮತ್ತು ಕಾರ್ಯದರ್ಶಿಗಳ ಪಿ.ಡಿ.ಖಾತೆಯಲ್ಲಿಡಲಾಗಿದೆ. ಇದರಲ್ಲಿ 5.00 ಲಕ್ಷ ರೂ.ಗಳನ್ನು ಸಿಬ್ಬಂದಿಗಾಗಿ ಖರ್ಚು ಮಾಡಲಾಗಿದೆ.

1992-93ನೇ ಸಾಲಿಗೆ 35.00 ಕೋಟಿ ರೂ.ಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ. ಈ ಹಣ ಖರ್ಚಾಗಿಲ್ಲವೆಂಬುದು ನಿಜ. ಆದಾಗ್ಯೂ ಈ 35.00 ಕೋಟಿ ರೂ.ಗಳನ್ನು ಶೀಘ್ರ ಪಡೆದುಕೊಂಡು ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಖರ್ಚು ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ.

5) ಮೂಡಿಗೆರೆ ತಾಲ್ಲೂಕಿನ ಕೆ.ಇ.ಬಿ.ಯಲ್ಲಿ ಲೈನ್‌ಮ್ಯಾನ್ ಹುದ್ದೆಗಳು ಖಾಲಿ.

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನಲ್ಲಿ ಕೆ.ಇ.ಬಿ. ಇಲಾಖೆಯಲ್ಲಿ ಲೈನ್‌ಮ್ಯಾನ್ ಹುದ್ದೆಗಳು ಖಾಲಿ ಇರುವುದಲ್ಲದೆ, ಬಹಳ ವಯಸ್ಸಾದವರು ಕುಡಿತಕ್ಕೆ ಬಲಿಯಾದವರೇ ಇದ್ದು, ಇವರುಗಳು ಗ್ರಾಮಾತಂರ ಪ್ರದೇಶದಲ್ಲಿನ ಕೆ.ಇ.ಬಿ. ಇಲಾಖೆ ಕೆಲಸಗಳನ್ನು (ಅಳವಡಿಸುವುದು ವೈರ್ ರಿಪೇರಿ ಮಾಡುವುದು) ಸರಿಯಾಗಿ ನಿರ್ವಹಿಸದೇ ಜನರಿಂದ ಬಹಳ ದೂರುಗಳು ಬರುತ್ತಿವೆ. ದಯಮಾಡಿ, ಕೂಡಲೇ ತೊಂದರೆಯನ್ನು ನಿವಾರಿಸಲು ಸರ್ಕಾರ ಮುಂದಾಗಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಕೆ. ಎ. ನಿಸಾರ್ ಅಹಮದ್ (ಇಂಧನ ರಾಜ್ಯದ ಸಚಿವರು) : (ಉಪ ಮುಖ್ಯ ಮಂತ್ರಿಗಳ ಪರವಾಗಿ) ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕು ಸಂಪೂರ್ಣ ಮಲೆನಾಡಿನ ಪ್ರದೇಶವಾಗಿರುತ್ತದೆ. ಸರಿಯಾದ ಸಂಪರ್ಕ ವ್ಯವಸ್ಥೆ ಇಲ್ಲದಿರುವುದರಿಂದ ಲೈನುಗಳ ದುರಸ್ತಿ ಮತ್ತು ನಿರ್ವಹಣೆಯ ಕಾರ್ಯಗಳಲ್ಲಿ ಸ್ವಲ್ಪ ವಿಳಂಬ ಉಂಟಾಗುವುದು ಸಹಜ. ಅಲ್ಲದೇ ಮೂಡಿಗೆರೆಯಲ್ಲಿರುವ ಮಂಡಳಿಯ ಉಪ ವಿಭಾಗದಲ್ಲಿ ಹಾಲಿ ನಾಲ್ಕು ಲೈನ್‌ಮನ್ ಹುದ್ದೆಗಳು ಖಾಲಿ ಇರುವುದರಿಂದ, ನಿರ್ವಹಣೆ ಮತ್ತು ರಿಪೇರಿ ಕೆಲಸಗಳಲ್ಲಿ ಸ್ವಲ್ಪ ಮಟ್ಟಿಗೆ ವ್ಯತ್ಯಯ ಉಂಟಾಗುತ್ತಿದೆ. ಕರ್ತವ್ಯ ಭ್ರಷ್ಟ ನೌಕರರುಗಳ ವಿರುದ್ಧ ವಿಚಾರಣೆ ನಡೆಸಿ, ಸಿಡಿಸಿಎ ನಿಯಮಗಳ ಪ್ರಕಾರ ಶಿಸ್ತಿನ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಹಾಗೂ ಖಾಲಿ ಇರುವ ಲೈನ್‌ಮನ್‌ಗಳ ಹುದ್ದೆಗಳನ್ನು ಆದಷ್ಟು ಜಾಗ್ರತೆ ಭರ್ತಿ ಮಾಡಲಾಗುವುದು.

6) Direct K.S.R.T.C. Bus from Nippani to Bangalore.

Sri. Subhash S. Joshi (Nippani) : Mr. Speaker Sir, K.S.R.T.C. has started new Super Delux Bus from Chikkodi to Bangalore. But as there is no